# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವದ ಪ್ರಯುಕ್ತ ಪೂರ್ವಭಾವಿಯಾಗಿ ದಿನಾಂಕ: 18-10-2023ರಂದು ಬೆಳಗ್ಗೆ 9.00ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಗಳು**

**ಉಪಸ್ಥಿತರು:**

1. ಪ್ರೊ. ಎನ್.ಕೆ. ಲೋಕನಾಥ್ — ಕುಲಪತಿ ಹಾಗೂ ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪರವಾಗಿ ಪ್ರೊ. ಎ.ಹೆಚ್.ಎಂ. ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ — ಸದಸ್ಯರು
3. ಶ್ರೀ ಸುರೇಶ್, ಕೆ.ಎ.ಎಸ್ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
4. ಡಾ. ಟಿ.ಆರ್. ಚಂದ್ರಶೇಖರ್ — ಸದಸ್ಯರು
5. ಶ್ರೀ ಗೋಕುಲ್ ಗೋವರ್ಧನ್ — ಸದಸ್ಯರು
6. ಶ್ರೀಮತಿ ಸೌಮ್ಯ ಈರಪ್ಪ ಕೆ. — ಸದಸ್ಯರು
7. ಪ್ರೊ. ಕೆ.ಎಂ. ಮಹದೇವನ್, ಕುಲಸಚಿವರು (ಪರೀಕ್ಷಾಂಗ) — ಸದಸ್ಯರು
8. ಶ್ರೀಮತಿ ಶೈಲಜ.ವಿ.ಆರ್., ಕೆಎಎಸ್ — ಕುಲಸಚಿವೆ ಹಾಗೂ ಸದಸ್ಯ ಕಾರ್ಯದರ್ಶಿ
9. ಪ್ರೊ. ಬಿ. ಮಹದೇವಪ್ಪ, ಹಣಕಾಸು ಅಧಿಕಾರಿಗಳು (ಪ್ರಭಾರ) — ವಿಶೇಷ ಆಹ್ವಾನಿತರು

**ಅನುಪಸ್ಥಿತರು:**

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಆಹ್ವಾನಿಸಿದರು ಮತ್ತು ಚರಿತ್ರಾರ್ಹವಾದ ಮೈಸೂರು ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಮತ್ತು ವಿವಿಧ ಕೋರ್ಸುಗಳ ಪದವಿಗಳನ್ನು ಪ್ರದಾನಿಸುವ ಸಲುವಾಗಿ ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯಗಳ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ ವಿಶೇಷ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

| | |
|---|---|
| ವಿಷಯ ಸಂಖ್ಯೆ: 1.1 | 103ನೇ ವಾರ್ಷಿಕ ಘಟಿಕೋತ್ಸವದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | ವಿವಿಧ ಪದವಿಗಳನ್ನು 103ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನಿಸುವ ಸಲುವಾಗಿ ಮಂಡಿಸಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿಂಡಿಕೇಟ್ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿತು. |
| ವಿಷಯ ಸಂಖ್ಯೆ:1.2 | 103ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಬಗ್ಗೆ. |
| ತೀರ್ಮಾನ | ಘನತೆವೆತ್ತ ಕುಲಾಧಿಪತಿಗಳ ಕಾರ್ಯದರ್ಶಿಯವರ ದಿನಾಂಕ: 15.05.2023ರ ಪತ್ರದನ್ವಯ 103ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದ್ಮಭೂಷಣ ನಾಡೋಜ ಡಾ.ಪಿ.ಎಸ್. ಶಂಕರ್, ವಿಶ್ರಾಂತ ವೈದ್ಯಕೀಯ ಪ್ರಾಧ್ಯಾಪಕರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು, ಶ್ರೀ ಕೆ.ಬಿ.ಗಣಪತಿ, ಪ್ರಧಾನ ಸಂಪಾದಕರು, ಮೈಸೂರು ಮಿತ್ರ ಮತ್ತು ಸ್ಟಾರ್ |

| | |
|---|---|
| | ಆಫ್ ಮೈಸೂರು ದಿನಪತ್ರಿಕೆ, ಮೈಸೂರು ಮತ್ತು ಶ್ರೀ ಜಾವಗಲ್ ಶ್ರೀನಾಥ್, ವಿಶ್ರಾಂತ ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರರು ಮತ್ತು ಐಸಿಸಿ ಕ್ರಿಕೆಟ್ ಪಂದ್ಯಗಳ ತೀರ್ಪುಗಾರರು ಇವರುಗಳಿಗೆ ಗೌರವ ಡಾಕ್ಟರೇಟ್ (D.Sc ಮತ್ತು D.Litt.,) ಪದವಿ ಪ್ರದಾನ ಮಾಡಲು ಕುಲಾಧಿಪತಿಗಳು ಅನುಮೋದಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |

ಕೊನೆಯಲ್ಲಿ ಅಧ್ಯಕ್ಷರು ಎಲ್ಲರಿಗೂ ವಂದಿಸಿ, 103ನೇ ವಾರ್ಷಿಕ ಘಟಿಕೋತ್ಸವದ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಲು ಎಲ್ಲಾ ಸದಸ್ಯರುಗಳು ಸಹಕರಿಸಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ** **ಕುಲಪತಿ ಹಾಗೂ ಅಧ್ಯಕ್ಷರು**